# ಬನ್ಸಾಲಿ ಚಿತ್ರದಲ್ಲಿ ಮತ್ತೆ ರಣವೀರ್

ರಣವೀರ್ ಸಿಂಗ್ ಹಾಗೂ ನಿರ್ದೇಶಕ ಸಂಜಯ್ ಲೀಲಾ ಬನ್ಸಾಲಿ ಯಶಸ್ಸಿನ ಗ್ರಾಫ್ ಚೆನ್ನಾಗಿದೆ. ಇಬ್ಬರೂ ತೊಡಗಿದ್ದ 'ಗೋಲಿಯೋಂ ಕಿ ರಾಸಲೀಲಾ... ರಾಮ್‌ಲೀಲಾ', 'ಬಾಜಿರಾವ್ ಮಸ್ತಾನಿ' ಹಾಗೂ 'ಪದ್ಮಾವತ್' ಸಿನಿಮಾಗಳು ಗೆದ್ದಿದ್ದವು. ಈಗ 'ಬೈಜು ಬಾವ್ರಾ' ಹಿಂದಿ ಚಿತ್ರದಲ್ಲೂ ರಣವೀರ್ ಸಿಂಗ್ ನಟಿಸಲು ಒಪ್ಪಿಗೆ ಸೂಚಿಸುವ ನಿರೀಕ್ಷೆ ಇದೆ. ಈ ಬಗೆಗೆ ಅವರಿನ್ನೂ ಸ್ಪಷ್ಟವಾಗಿ ಏನನ್ನೂ ಹೇಳಿಲ್ಲವಾದರೂ ಬಾಲಿವುಡ್ ಸುದ್ದಿಮನೆಯಲ್ಲಿ ಈ ಸಂಗತಿ ಓಡಾಡುತ್ತಿದೆ.

ಸಂಗೀತಗಾರನ ಕುರಿತ ಪೀರಿಯೆಡ್ ಸಿನಿಮಾ ಇದಾಗಿದ್ದು, ಮೊದಲಿಗೆ ರಣಬೀರ್ ಕಪೂರ್ ಅವರನ್ನು ಈ ಪಾತ್ರಕ್ಕೆ ಬನ್ಸಾಲಿ ಪರಿಗಣಿಸಿದ್ದರು. ಆದರೆ, ಸಂಕೀರ್ಣವಾದ ಈ ಪಾತ್ರವನ್ನು ನಿರ್ವಹಿಸಲು ರಣಬೀರ್ ನಿರಾಕರಿಸಿದರು. ಈಗ ರಣವೀರ್ ಸಿಂಗ್ ಚಿತ್ರಕಥಾ ಎಳೆಯನ್ನು ಕೇಳಿ, ಉತ್ಸಾಹ ತೋರಿಸಿದ್ದಾರೆನ್ನುವ ಸುದ್ದಿ ಇದೆ. ನಟನಾಗಿ ರಣವೀರ್ ಇರುವಿಕೆಗೆ ತಕ್ಕಂತೆ ಸ್ಕ್ರಿಪ್ಟ್‌ನಲ್ಲಿ ನಿರ್ದೇಶಕರು ಕೆಲವು ಮಾರ್ಪಾಟುಗಳನ್ನು ಮಾಡುತ್ತಿದ್ದಾರೆ.

ಭಾರತ ಕ್ರಿಕೆಟ್ ತಂಡವು 1983ರಲ್ಲಿ ವಿಶ್ವಕಪ್ ಗೆದ್ದ ಸಂದರ್ಭದ ವಸ್ತುವನ್ನು ಒಳಗೊಂಡ '83' ಚಿತ್ರದಲ್ಲಿ ರಣವೀರ್ ಅಭಿನಯಿಸುತ್ತಿದ್ದಾರೆ. ಕಬೀರ್ ಖಾನ್ ನಿರ್ದೇಶನದ ಇದರಲ್ಲಿ ಕಪಿಲ್ ದೇವ್ ಪಾತ್ರಧಾರಿಯಾಗಿ ಅವರು ಕಾಣಿಸಿಕೊಂಡಿರುವುದು ವಿಶೇಷ.

■ ವಿಶಾಖ ಎನ್.





# ಆರ್ಯ ಬದುಕಿಗೆ ಸಾರ್ಪಟ್ಟ ಪರಂಪರೈ ತಿರುವು

'ಸಾರ್ಪಟ್ಟ ಪರಂಪರೈ' ತಮಿಳು ಸಿನಿಮಾ ನಟ ಆರ್ಯ ವೃತ್ತಿಬದುಕಿಗೊಂದು ಹೊಸ ತಿರುವು ದಕ್ಕಿಸಿಕೊಟ್ಟಿದೆ. ಸೂಪರ್‌ಸ್ಟಾರ್ ಅಲ್ಲದೇಹೋದರೆ ಅಕಸ್ಮಾತ್ತಾಗಿ ಒದಗಿಬರುವ ಅನುಕೂಲಕ್ಕೆ ಈ ಚಿತ್ರದ ಫಲಿತಾಂಶ ಸಾಕ್ಷಿಯಾಗಿದೆ. 'ಅಮೆಜಾನ್ ಪ್ರೈಮ್'ನಲ್ಲಿ ಬಿಡುಗಡೆಯಾದ ಈ ಚಿತ್ರಕ್ಕೆ ಉತ್ತಮ ಪ್ರತಿಕ್ರಿಯೆ ಸಿಕ್ಕಿದೆ. ಇಷ್ಟೊಂದು ಜನ ಇದನ್ನು ನೋಡಬಹುದು ಎಂದು ಖುದ್ದು ಆರ್ಯ ಭಾವಿಸಿರಲಿಲ್ಲ.

1970ರ ದಶಕದ ಉತ್ತರ ಮದ್ರಾಸ್‌ನ ದಮನಿತ ಸಮುದಾಯದವರಲ್ಲಿನ ಬಾಕ್ಸಿಂಗ್ ಕಿಚ್ಚನ್ನು ವಸ್ತುವಾಗಿ ಉಳ್ಳ ಸಿನಿಮಾ 'ಸಾರ್ಪಟ್ಟ ಪರಂಪರೈ'. 'ಇದುವರೆಗೆ ಅಲ್ಲಿನ ಜನರನ್ನು ಚಿತ್ರಗಳಲ್ಲಿ ರೌಡಿಗಳಂತೆ ಬಿಂಬಿಸಲಾಗಿತ್ತು. ಅದು ವಸ್ತುಸ್ಥಿತಿ ಆಗಿರಲಿಲ್ಲ. ಅಲ್ಲಿನ ಯುವಕರಲ್ಲಿನ ಬಾಕ್ಸಿಂಗ್ ಪ್ರೀತಿಯ ಸಂಕಥನ ಬೇರೆಯೇ ಇದೆ. ಅದನ್ನು ನಿರ್ದೇಶಕ ಪಾ. ರಂಜಿತ್ ತೆರೆಮೇಲೆ ಚೆನ್ನಾಗಿ ತಂದರು' ಎಂದು ಆರ್ಯ ಹೇಳಿದ್ದಾರೆ.

ಆರ್ಯ ಸ್ವಯಂ ಕ್ರೀಡಾಪ್ರೇಮಿ. ಹಿಂದೊಮ್ಮೆ ಬಾಕ್ಸಿಂಗ್ ಕೂಡ ಕಲಿತವರೇ. ಫುಟ್‌ಬಾಲ್ ಅವರ ನೆಚ್ಚಿನ ಕ್ರೀಡೆ. ದಿನಕ್ಕೆ ಸರಾಸರಿ ಮೂರು ತಾಸು ಫುಟ್‌ಬಾಲ್ ನೋಡುವುದು ಅವರ ಹವ್ಯಾಸ. ಸಿನಿಮಾಗಳಿಗಿಂತ ಹೆಚ್ಚಾಗಿ ಫುಟ್‌ಬಾಲ್ ಪಂದ್ಯಗಳನ್ನೇ ನೋಡುವ ಅವರಿಗೆ ಒಂದು ಕ್ರೀಡಾಚಿತ್ರದಲ್ಲಿ ಅಭಿನಯಿಸಬೇಕು ಎನ್ನುವ ಅದಮ್ಯ ಬಯಕೆ ಇತ್ತು. ಪಾ. ರಂಜಿತ್ ಇಂತಹ ಕಥಾವಸ್ತುವನ್ನು ಸಿದ್ಧಪಡಿಸಿರುವ ವಿಷಯ ತಿಳಿದದ್ದೇ ಪರಿಚಿತ ನಟನ ಮೂಲಕ ತಾವು ಇದರಲ್ಲಿ ನಟಿಸಲು ಸಿದ್ಧ ಎನ್ನುವ ಸಂದೇಶವನ್ನು ರವಾನಿಸಿದರು. ಒಂದಿಷ್ಟು ದಿನಗಳ ನಂತರ ರಂಜಿತ್ ಇವರನ್ನು ಸಂಪರ್ಕಿಸಿದರು. ಹೀಗೆ ಶುರುವಾದ ಮಾತುಕತೆ ಈಗ 'ಸಾರ್ಪಟ್ಟ ಪರಂಪರೈ' ಸಿನಿಮಾರೂಪದಲ್ಲಿ ಹೊಸ ತಿರುವು ನೀಡಿದೆ.

ಈ ಚಿತ್ರಕ್ಕಾಗಿ ವಿಶೇಷ ರೀತಿಯ ತಯಾರಿಯನ್ನು ಎಲ್ಲರೂ ನಡೆಸಿದ್ದರು. ಸ್ಕ್ರಿಪ್ಟ್ ಸಿದ್ಧವಾದ ಮೇಲೆ 45 ದಿನಗಳ ಕಾರ್ಯಾಗಾರ. ಅದರಲ್ಲಿ ಎಲ್ಲರೂ ತಂತಮ್ಮ ಸಂಭಾಷಣೆಯನ್ನು ಮನನ ಮಾಡಿಕೊಳ್ಳುವುದಲ್ಲದೆ ಆ ಕಾಲದ ಪಾತ್ರಗಳ ಹಾವ–ಭಾವ ಹೇಗಿತ್ತೆನ್ನುವುದನ್ನು ಅರ್ಥೈಸಿಕೊಂಡು ಸಿದ್ಧರಾಗಬೇಕಿತ್ತು. ಚಿತ್ರದಲ್ಲಿ ಬೀಡಿ ತಾತನ ಪಾತ್ರ ನಿರ್ವಹಿಸಿರುವ ಗಜಪತಿ ಆ ಕಾಲದವರೇ ಆಗಿದ್ದು, ಅಲ್ಲಿನ ಪರಿಸರದಲ್ಲೇ ಇದ್ದವರು. ಅವರಿಂದ ಅನೇಕ ಮಾಹಿತಿಯನ್ನು ರಂಜಿತ್ ಕಲೆಹಾಕಿದರು.

'ಸೂಪರ್‌ಸ್ಟಾರ್ ಆಗಿದ್ದವರ ಸಿನಿಮಾಗಳನ್ನು ನೋಡಲಷ್ಟೇ ಪ್ರೇಕ್ಷಕರು ಈಗ ಚಿತ್ರಮಂದಿರಗಳಿಗೆ ಲಗ್ಗೆ ಇಡುತ್ತಾರೆ. ಒಟಿಟಿ ನನ್ನಂಥವರ ಪಾಲಿಗೆ ವರದಾನವಾಗಿದೆ. ನನ್ನ ವೃತ್ತಿಬದುಕಿನ ಮುಖ್ಯವಾದ ಚಿತ್ರ ಇದು' ಎಂದು ಹೆಮ್ಮೆಪಡುವ ಆರ್ಯ ಚಿತ್ರದ ಸಹ ನಿರ್ಮಾಪಕರಲ್ಲಿ ಒಬ್ಬರೂ ಹೌದು. ■